**ಬೆಂಗಳೂರು! ಪಿನ್‌ಕೋಡ್‌ನ ಆಚೆ ಏನಿದೆ?**

ಬೆಂಗಳೂರನ್ನು ಒಬ್ಬ ಕವಿಯ ಡೈರಿ, ಒಬ್ಬ ಕಲಾವಿದನ ಸ್ಟುಡಿಯೋ, ಒಬ್ಬ ಚಲನಚಿತ್ರ ನಿರ್ದೇಶಕನ ಸಂಕಲನದ ಮೇಜು, ಒಬ್ಬ ಪ್ರದರ್ಶಕನ ರಂಗಸ್ಥಳ ಎಂದು ಕಲ್ಪಿಸಿಕೊಳ್ಳಿ!

ಹತ್ತು ಹಲವು ಬಗೆಯ ಸಮುದಾಯಗಳು, ಹೆಚ್ಚು ಕಣ್ಣಿಗೆ ಬೀಳದ ಸ್ಥಳಗಳು, ಬಹು-ಪದರದ ಇತಿಹಾಸಗಳು ಮತ್ತು ಸಾಮೂಹಿಕ ಆಕಾಂಕ್ಷೆಗಳಿಂದ ಹೊಮ್ಮುತ್ತಿರುವ ನಗರದ ಹೊಸ ಧ್ವನಿಗಳಿಗೆ ಕಿವಿಗೊಡಿ.

ಪ್ರಾಜೆಕ್ಟ್ 560 ಒಂದು ಕಲಾತ್ಮಕ ಪ್ರಚೋದನೆಯಾಗಿದ್ದು, ಇದು ಪರಿಚಿತ ಸಾಂಸ್ಕೃತಿಕ ಕೇಂದ್ರಗಳಾಚೆಗೆ, ವೇಗವಾಗಿ ವಿಸ್ತರಿಸುತ್ತಿರುವ ಮಹಾನಗರದ ಪರಿಧಿಯ ಕಡೆಗೆ, ಬಹುಪದರಗಳ ಗತಕಾಲ, ವರ್ತಮಾನದ ಗೊಂದಲಗಳು ಮತ್ತು ಕಲ್ಪಿತ ಭವಿಷ್ಯಗಳ ಮೂಲಕ ನೋಡಲು ಪ್ರೇರೇಪಿಸುತ್ತದೆ.

ಸಮುದಾಯವಾಗಿ ನಮ್ಮ ಭವಿಷ್ಯವನ್ನು ನಾವು ಹೇಗೆ ಸೃಜನಾತ್ಮಕವಾಗಿ ಕಂಡುಕೊಳ್ಳುತ್ತೇವೆ ಎನ್ನುವ ಚಿಂತನೆ ನಿಮ್ಮಲ್ಲಿದ್ದರೆ, ಪ್ರಾಜೆಕ್ಟ್ 560 ನಾವೆಲ್ಲ ಸೇರಿ ಆಡುವ ಮೈದಾನವಾಗಿದೆ.

**ನಗರದ ಸಾಮೂಹಿಕ ಮರು-ಕಲ್ಪನೆ (Collective Reimagination)**

ಬೆಂಗಳೂರು ಹಿಡಿದಿಡಲು ಕಷ್ಟಕರವಾದ ವೇಗದಲ್ಲಿ ವಿಸ್ತಾರವಾಗುತ್ತಿದೆ. ಬೆಂಗಳೂರಿನ ಸೃಜನಶೀಲ ಚೈತನ್ಯವು ಚಲನಶೀಲವಾಗಿದೆ. ನಗರದ ಪ್ರಮುಖ ಕಲಾತ್ಮಕ ಶಕ್ತಿಯು ಔಪಚಾರಿಕ ಅಥವಾ ಸಾಂಪ್ರದಾಯಿಕ ಸಾಂಸ್ಕೃತಿಕ ಕೇಂದ್ರಗಳಿಗೆ ಸೀಮಿತವಾಗಿಲ್ಲ. ಇದು ಅರ್ಬನ್ ವಿಲೇಜ್, ವಲಸಿಗರ ನೆಲೆಗಳು, ಓದುಗರ ಗುಂಪುಗಳು, ಪೆನ್ಸಿಲ್ ಜಾಮರ್‌ಗಳು ಮತ್ತು ಅನೌಪಚಾರಿಕ ಸೃಜನಶೀಲ ಇಕಾನಮಿಗಳಂತಹ ಅನಿರೀಕ್ಷಿತ ಮೂಲೆಗಳಲ್ಲಿ ಬೆಳೆಯುತ್ತಿದೆ.

ಪ್ರಾಜೆಕ್ಟ್ 560ಯ ಈ ಸಂಚಿಕೆ ಬೆಂಗಳೂರು ನಗರದ ಇತಿಹಾಸಗಳು, ಬದುಕಿನ ಹೆಜ್ಜೆಗುರುತುಗಳುಳ್ಳ ಸ್ಥಳಗಳು (ಲಿವ್ಡ್ ಸ್ಪೇಸ್) ಮತ್ತು ಕಲ್ಪಿತ ಭವಿಷ್ಯಗಳೊಂದಿಗೆ ತೊಡಗಿಸಿಕೊಳ್ಳಲು ಸಾಮೂಹಿಕವಾಗಿ ಒಂದು ಜಾಗವನ್ನು ರೂಪುಗೊಳಿಸಲು, ಬೆಂಗಳೂರು ನಗರದ ತಜ್ಞರೊಂದಿಗೆ, ಆಳವಾದ, ಇನ್ಕ್ಯುಬೇಷನ್ ಕೇಂದ್ರಿತ (ಲ್ಯಾಬ್) ಪ್ರಯಾಣಕ್ಕೆ ಕರೆ ನೀಡುತ್ತದೆ.

ಪ್ರಾಜೆಕ್ಟ್ 560 ಈಗ ನಗರದ ತಜ್ಞರೊಂದಿಗೆ ಆಳವಾದ ಇನ್‌ಕ್ಯುಬೇಶನ್-ಕೇಂದ್ರಿತ ಪ್ರಯಾಣಕ್ಕೆ ಬದಲಾಗುತ್ತದೆ.

ಸಮಾನಮನಸ್ಕ ಸೃಜನಶೀಲ ತಜ್ಞರ ತಂಡದೊಂದಿಗೆ ಸಹಯೋಗ-ಸಂಭಾಷಣೆಗಳ ಮೂಲಕ ಸೃಜನಶೀಲ ಕಲ್ಪನೆಗಳನ್ನು ಅಭಿವೃದ್ಧಿಪಡಿಸಲು ಬಯಸುವ ಬೆಂಗಳೂರು ಮೂಲದ ಕಲಾವಿದರು ಮತ್ತು ಸಂಶೋಧಕರನ್ನು IFA ಹುಡುಕುತ್ತಿದೆ.

. ಈ ಸಂಭಾಷಣೆಗಳು ನೆರೆಹೊರೆಯ ಸಮುದಾಯದೊಂದಿಗೆ ಕೆಲಸ ಮಾಡಲು ಪ್ರಯತ್ನಗಳು (ನೈಬರ್ಹೂಡ್ ಇಂಟರ್ವೆನ್ಶನ್), ನಗರವಾದಿ ತುಡಿತಗಳು, ನಗರದಾದ್ಯಂತ ವರ್ಷಾವಧಿ ಕ್ಯುರೇಟೋರಿಯಲ್ ದೃಷ್ಟಿಕೋನಗಳು

ಈ ಕಾರ್ಯಕ್ರಮವು ಬೆಂಗಳೂರಿನ ಬಹುಭಾಷಾ ವಾಸ್ತವಗಳು, ಅದರ ಜಾತಿ, ಭಾಷೆ ಮತ್ತು ಲಿಂಗದ ಸಂಕೀರ್ಣ ಹಾಗೂ ಚಲನಶೀಲ ಸಂಬಂಧಗಳು, ಮತ್ತು ನಮ್ಮ ಪಟ್ಟಣ-ಪರಿಸರವನ್ನು (ಅರ್ಬನ್ ಎಕಾಲಜಿ) ರೂಪಿಸುವ ನಿರ್ಣಾಯಕ ಪರಿಸರ-ಸಂಕಥನಗಳ ಕುರಿತು ಇನ್ನೂ ಕಲ್ಪನೆಯ ಮಟ್ಟದಲ್ಲಿರುವ, ಹಿಂದೆ ಕಂಡಿಲ್ಲದ, ಸಾಹಸೀ ಆಶಯಗಳನ್ನು, ಸೃಜನಾತ್ಮಕ ಚುರುಕುತನ

ಹಾಗೂ ಸೂಕ್ಷ್ಮತೆಯೊಂದಿಗೆ ಪೋಷಿಸುವ ಸಹವರ್ತಿ ಜಾಲವಾಗಿ (ಪೀರ್ ನೆಟ್ವರ್ಕ್) ಮರು ಕಲ್ಪನೆ ಮಾಡಲಾಗಿದೆ. ಇದು ಯೋಜನೆಯ ಅವಧಿ ಮುಗಿದ ನಂತರವೂ ಪರಸ್ಪರ ಯೋಚಿಸುವುದನ್ನು ಮುಂದುವರೆಸುವ ಒಂದು ಸಮೂಹವಾಗಿರುವಂಥದ್ದು.

ನಗರದ ಗತಕಾಲ, ವರ್ತಮಾನ ಮತ್ತು ಭವಿಷ್ಯಗಳೊಂದಿಗೆ ಮುಖ್ಯವಾಗಿ ತೊಡಗಿಸಿಕೊಳ್ಳುವ ಇನ್‌ಕ್ಯುಬೇಶನ್-ಕೇಂದ್ರಿತ ಕಲಾ ಯೋಜನೆಗಳನ್ನು ಕಾರ್ಯಗತಗೊಳಿಸಲು IFA ಬಯಸುತ್ತದೆ. ಕಲಾವಿದರು ಮತ್ತು ವಿದ್ವಾಂಸರನ್ನು ಒಟ್ಟುಗೂಡಿಸುವ ಸಹಯೋಗದ ಯೋಜನೆಗಳನ್ನು ಸಹ ಪ್ರೋತ್ಸಾಹಿಸಲಾಗುತ್ತದೆ. ಸಂವಾದಗಳು, ಅನ್ವೇಷಣೆಗಳು, ನಡಿಗೆಗಳು(ವಾಕ್ಸ್), ಕಾರ್ಯಾಗಾರಗಳು ಮತ್ತು ಸಹವರ್ತಿ-ವಿನಿಮಯದ (ಪೀರ್ ಎಕ್ಸ್ಚೇಂಜ್) ಮೂಲಕ ಯೋಜನೆಗಳು **8 ತಿಂಗಳ** ಅವಧಿಯಲ್ಲಿ ರೂಪುಗೊಳ್ಳುತ್ತವೆ.

ಯೋಜನೆಗಳ ಫಲಿತಾಂಶಗಳು ವಿವಿಧ ರೀತಿಯಲ್ಲಿ ಗ್ರಾಫಿಕ್ ಸಂಕಥನಗಳು, ಅನಿಮೇಷನ್‌ಗಳು, ಕಾಲ್ಪನಿಕವಲ್ಲದ ಸೃಜನಾತ್ಮಕ ಸಾಹಿತ್ಯ, ಸಂಗೀತದ ಅನ್ವೇಷಣೆಗಳು, ಪ್ರದರ್ಶನ ಕಲೆಗಳು, ಉಪನ್ಯಾಸಗಳು, ಪ್ರದರ್ಶನಗಳು, ಸೈಟ್-ರೆಸ್ಪಾನ್ಸಿವ್ ಇನ್ ಸ್ಟಾಲೇಶನ್‌ಗಳು, ಕ್ರಿಯೇಟಿವ್ ಕೋಡಿಂಗ್ ಬೂಟ್‌ಕ್ಯಾಂಪ್‌ಗಳು, ಸಿಂಥ್‌ಜಾಮ್ಮಿಂಗ್, ಕಲಾತ್ಮಕ ಸಂಶೋಧನಾ ಮೊನೊಗ್ರಾಫ್ ಗಳು (ಪುಸ್ತಕ), ಎಸ್ಸೇ ಫ಼ಿಲ್ಮ್ಸ್ ಅಥವಾ ಅಂತರ್ಶಿಸ್ತೀಯ ಕೆಲಸಗಳನ್ನು ಒಳಗೊಂಡಿರಬಹುದು. ಈ ಫಲಿತಾಂಶಗಳ ಪ್ರಸ್ತುತಿಯು ಸಾರ್ವಜನಿಕವಾಗಿ ಮತ್ತು ಭೌತಿಕ ರೂಪದಲ್ಲಿರಬೇಕು, ಅಗತ್ಯವಿದ್ದರೆ ಭಾಗಶಃ ವರ್ಚುವಲ್ ಅಂಶಗಳನ್ನು ಒಳಗೊಂಡಿರಬಹುದು.

**ನಗರದೊಂದಿಗೆ ಸಹಯೋಗೀ ತೊಡಗುವಿಕೆಯನ್ನು (Collaborative Engagements) ವರ್ಧಿಸುವುದು**

ನಿಮ್ಮ ಅಭ್ಯಾಸವು ಅತಿ-ಸ್ಥಳೀಯ (ಹೈಪರ್‌ಲೋಕಲ್) ನೆರೆಹೊರೆಯ ಸಮುದಾಯದೊಂದಿಗೆ ಕೆಲಸ ಮಾಡವ ಪ್ರಯತ್ನ, ತೀವ್ರವಾದ ಸಂಶೋಧನೆಯುಳ್ಳ ಕಲಾತ್ಮಕ ಮೊನೊಗ್ರಾಫ್ (ಪುಸ್ತಕ), ಅಥವಾ ಸಾಮೂಹಿಕ ಕ್ಯುರೇಟೋರಿಯಲ್ ಯೋಜನೆಯಂತೆ ಕಂಡುಬಂದರೆ, ಪ್ರಾಜೆಕ್ಟ್ 560 ನಿಮ್ಮ ಪ್ರಕ್ರಿಯೆಗೆ ಮೌಲ್ಯ ನೀಡುತ್ತದೆ. ಪ್ರಾಜೆಕ್ಟ್ 560 ಸಾಮಾನ್ಯ ಸೃಜನಾತ್ಮಕ ಅಭ್ಯಾಸಗಳಿಂದ ಹೊರಬರಲು ಮತ್ತು ವಿವಿಧ ಕಲಾತಪ್ರಕಾರಗಳು ಮತ್ತು ಸಹವರ್ತಿ ಜಾಲಗಳಲ್ಲಿ ಜಾಮ್ ಮಾಡಲು ಮತ್ತು ಸಹಯೋಗದಲ್ಲಿ ಕೆಲಸ ಮಾಡಲು ಪ್ರೋತ್ಸಾಹಿಸ ಬಯಸುತ್ತದೆ.

ಈ ಸಾಂಸ್ಕೃತಿಕ ಪರಿಸರ-ವ್ಯವಸ್ಥೆಯನ್ನು ಜೀವಂತವಾಗಿ, ಸಂವಾದಾತ್ಮಕವಾಗಿ ಮತ್ತು ಸಮುದಾಯ-ಚಾಲಿತವಾಗಿಡಲು, ಪ್ರಾಜೆಕ್ಟ್ 560 ಈ ಆವೃತ್ತಿಯು ಕಾರ್ಯಗತಗೊಳಿಸಿದ ಯೋಜನೆಗಳ ಜೊತೆಗೆ ಸರಣಿ ಕಾರ್ಯಕ್ರಮಗಳ ಮೂಲಕ ನಗರದೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತದೆ. ಅನೌಪಚಾರಿಕ ಸಭೆಗಳು, ಬಹುಭಾಷಾ ಒಟ್ಟುಸೇರುವಿಕೆ (ಹ್ಯಾಂಗ್‌ಔಟ್) ಗಳಿಗಾಗಿ ಸ್ಥಳ-ನಿರ್ಮಾಣ, ಅನೌಪಚಾರಿಕ ಹರಟೆ, ಸಹವರ್ತಿ-ವಿನಿಮಯ ಮತ್ತು ನಿರಂತರ ಸಂವಾದವನ್ನು ಪ್ರೋತ್ಸಾಹಿಸಲು ನಾವು ಬಯಸುತ್ತೇವೆ.

ಪ್ರಾಜೆಕ್ಟ್ 560ಯ ಆರ್ಕೈವ್‌ಗಳನ್ನು ಮರು-ಸಕ್ರಿಯಗೊಳಿಸಲು, ಹಿಂದಿನ ಯೋಜನೆಗಳನ್ನು ವಿವಿಧ ಸಮುದಾಯಗಳೊಂದಿಗೆ ಮರು-ಪ್ರದರ್ಶಿಸಲು ವಿನ್ಯಾಸಗೊಳಿಸಲಾದ ಮುಕ್ತ ಸಾರ್ವಜನಿಕ ಪುನರಾವರ್ತನೆಗಳು.

ಕಥೆ ಹೇಳುವ ನಡಿಗೆಗಳಿಂದ ಹಿಡಿದು ಎಸ್ಸೇ ಫ಼ಿಲ್ಮ್ಸ್, ಕ್ಲೈಮೇಟ್ ಫ಼ಿಕ್ಷನ್ ಮತ್ತು ಸೈಟ್-ರೆಸ್ಪಾನ್ಸಿವ್ ಕಲೆಯವರೆಗೆ, ಪ್ರಾಜೆಕ್ಟ್ 560 ಬೆಂಗಳೂರನ್ನು, ಪ್ರಶ್ನಿಸಲು ಮತ್ತು ತನ್ನನ್ನು ತಾನೇ ಮರು-ಬರೆಯಲು ಪ್ರೇರೇಪಿಸುವ ಮುಕ್ತ ಕರೆಯಾಗಿದೆ.

**ನಮ್ಮ 560. ನಮ್ಮ ಪ್ರಾಜೆಕ್ಟ್. ನಮ್ಮ ಊರು.**

2018 ರಿಂದ ಕಾರ್ಯಕ್ರಮದ ಪ್ರಭಾವದ ಕುರಿತು 'ವಾಯ್ಸಸ್ ಫ್ರಮ್ ದ ಫೀಲ್ಡ್' (*ಕ್ಷೇತ್ರದಿಂದ ಬಂದ ಧ್ವನಿಗಳು)* ವರದಿಯ ನಂತರ, ನಗರದ ಹಲವು ಸ್ಥಳಗಳಲ್ಲಿ ಪ್ರಾಜೆಕ್ಟ್ 560 ಉತ್ಸವ, ಮತ್ತು ನಗರವಾದಿಗಳು, ವಾಸ್ತುಶಿಲ್ಪಿಗಳು, ಕಲಾವಿದರೊಂದಿಗೆ ಎರಡು ದುಂಡುಮೇಜಿನ ಸಭೆಗಳ ನಂತರ, **ಮಮತಾ ಸಾಗರ್, ಶರಣ್ಯ ರಾಮಪ್ರಕಾಶ್, ಅಭಿಷೇಕ ಕೃಷ್ಣಗೋಪಾಲ್, ಮತ್ತು ನವೀನ್ ಮಹಂತೇಶ್,** - ಈ ಬಾಹ್ಯ ತಜ್ಞರ ಸಮಿತಿಯ ನೇತೃತ್ವದಲ್ಲಿ 2025ರ ಕೊನೆಯಲ್ಲಿ ನಡೆದ ಕಾರ್ಯಕ್ರಮದ ಮೌಲ್ಯಮಾಪನವು, ಪ್ರಾಜೆಕ್ಟ್ 560ಗಾಗಿ ಸರಣಿ ಶಿಫಾರಸುಗಳನ್ನು ನೀಡಿತು. ಈ ಪ್ರಕ್ರಿಯೆಯಿಂದ ಬಂದ ಸಾಮೂಹಿಕ ಶಿಫಾರಸುಗಳಿಂದ ಪ್ರಸ್ತುತ ಕಾರ್ಯಕ್ರಮವು ರೂಪಗೊಂಡಿದೆ.

ಇನ್ನೂ, ಅರ್ಜಿ ಸಲ್ಲಿಸುವ ಪ್ರಕ್ರಿಯೆ, ಇನ್‌ಕ್ಯುಬೇಶನ್ ಸೈಕಲ್‌ಗಳು ಅಥವಾ ಮುಕ್ತ ಕಲ್ಪನೆಯನ್ನು ನೀಡಲು ಸಂಬಂಧಿಸಿದ ಎಲ್ಲಾ ಪ್ರಶ್ನೆಗಳಿಗೆ, john@indiaifa.org ಗೆ ಇಮೇಲ್ ಕಳುಹಿಸಿ.